# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1172 |
| ಉತ್ತರಿಸಬೇಕಾದ ದಿನಾಂಕ | 17.12.2025 |
| ಉತ್ತರಿಸಬೇಕಾದ ಸಚಿವರು | ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಒಟ್ಟು ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು; ಹಾಗೂ ಎಷ್ಟು ಲಕ್ಷ ಜನರು ಇಲ್ಲಿ ವಾಸಿಸುತ್ತಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು) | ರಾಜ್ಯದಲ್ಲಿ ಒಟ್ಟು 3025 ಕೊಳಗೇರಿ ಪ್ರದೇಶಗಳನ್ನು ಗುರುತಿಸಲಾಗಿದ್ದು, ಅವುಗಳ ಪೈಕಿ 2866 ಕೊಳಗೇರಿ ಪ್ರದೇಶಗಳನ್ನು ಮಂಡಳಿ ಕಾಯ್ದೆಯಡಿ ಘೋಷಿಸಲಾಗಿರುತ್ತದೆ.<br><br>ಈ ಕೊಳಗೇರಿ ಪ್ರದೇಶಗಳಲ್ಲಿ ಸುಮಾರು 40.50 ಲಕ್ಷಗಳ ಜನರು ವಾಸಿಸುತ್ತಿದ್ದು, ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಿದೆ. |
| ಆ | ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವವರಿಗೆ ಸರ್ಕಾರದಿಂದ ನೀಡಲಾಗಿರುವ ಮೂಲಭೂತ ಸೌಲಭ್ಯಗಳೇನು; | ರಾಜ್ಯದ್ಯಾಂತ ಬರುವ ಘೋಷಿತ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಸರ್ಕಾರವು ಆಯವ್ಯಯದಲ್ಲಿ ಕೊಳಗೇರಿ ಸುಧಾರಣೆ ಯೋಜನೆಯಡಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪ, ಸಮುದಾಯ ಶೌಚಾಲಯ ಹಾಗೂ ಸಮುದಾಯ ಭವನ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು, ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. |
| ಇ | ಕಳೆದ 5 ವರ್ಷಗಳಿಂದ ಕೊಳಚೆ ಪ್ರದೇಶ ಅಭಿವೃದ್ಧಿಗಾಗಿ ಸರ್ಕಾರ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ; ಹಾಗೂ ಯಾವ ಯಾವ ಕಾಮಗಾರಿಗಳಿಗೆ ಉಪಯೋಗಿಸಿಕೊಳ್ಳಲಾಗಿದೆ; | ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಗೆ ಕಳೆದ 5 ವರ್ಷಗಳಿಂದ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯ ಕಾಮಗಾರಿಗಳನ್ನು ಕೈಗೊಳ್ಳಲು ಕೊಳಗೇರಿ ಸುಧಾರಣೆ ಯೋಜನೆಯಡಿ ಒಟ್ಟು ರೂ.179.73 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಿದೆ.<br><br>ಸದರಿ ಅನುದಾನಕ್ಕೆ ಮೂಲಭೂತ ಸೌಲಭ್ಯ ಕಾಮಗಾರಿಗಳಾದ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪ, ಸಮುದಾಯ ಶೌಚಾಲಯ ಹಾಗೂ ಸಮುದಾಯ ಭವನಗಳ ಕಾಮಗಾರಿಗಳನ್ನು ಕೈಗೊಳ್ಳಲು ಉಪಯೋಗಿಸಿಕೊಳ್ಳಲಾಗಿರುತ್ತದೆ. |
| ಈ | ಕರ್ನಾಟಕ ರಾಜ್ಯವನ್ನು ಕೊಳಚೆ ಪ್ರದೇಶದಿಂದ ಮುಕ್ತವಾಗಿಸಲು ಸರ್ಕಾರ ಹಾಕಿಕೊಂಡಿರುವ ಯೋಜನೆ ಹಾಗೂ ಗುರಿಗಳೇನು; ಹಾಗೂ ಇರುವಂತಹ ಕೊಳಗೇರಿಗಳು ವಾಸಿಸಲು ಯೋಗ್ಯವಾಗಿದೆಯೇ? | ವಾಸಕ್ಕೆ ಯೋಗ್ಯವಲ್ಲದ ಕೊಳಗೇರಿ ಪ್ರದೇಶಗಳನ್ನು ಗುರುತಿಸಿ, ಮಂಡಳಿ ಕಾಯ್ದೆಯಡಿ ಘೋಷಿಸಿ, ಕೊಳಗೇರಿ ಸುಧಾರಣೆ ಯೋಜನೆ ಹಾಗೂ ರಾಜ್ಯವನ್ನು ಸ್ಲಂ ಮುಕ್ತಗೊಳಿಸಲು ವಸತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. |

**1.ಕೊಳಗೇರಿ ಸುಧಾರಣೆ ಯೋಜನೆ:-**

ರಾಜ್ಯದ್ಯಾಂತ ಬರುವ ಘೋಷಿತ ಕೊಳಗೇರಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಸರ್ಕಾರವು ಆಯವ್ಯದಲ್ಲಿ ಕೊಳಗೇರಿ ಸುಧಾರಣೆ ಯೋಜನೆಯಡಿ ಒದಗಿಸುವ ಅನುದಾನಕ್ಕೆ ಅನುಗುಣವಾಗಿ ಕೊಳಗೇರಿಗಳಲ್ಲಿ ನಿವಾಸಿಗಳು ವಾಸಿಸಲು ಯೋಗ್ಯವಾಗುವಂತೆ ಮೂಲಭೂತ ಸೌಲಭ್ಯಗಳಾದ ರಸ್ತೆ, ಚರಂಡಿ, ಒಳಚರಂಡಿ, ಕುಡಿಯುವ ನೀರು, ಬೀದಿ ದೀಪ, ಸಮುದಾಯ ಶೌಚಾಲಯ ಹಾಗೂ ಸಮುದಾಯ ಭವನ ಮುಂತಾದ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಿಯಾ ಯೋಜನೆ ತಯಾರಿಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ.

**2. ವಸತಿ ಯೋಜನೆ :-**

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ರಾಜ್ಯಾದ್ಯಂತ ಬರುವ ಆಯ್ದ ಘೋಷಿತ ಕೊಳಗೇರಿ ಪ್ರದೇಶಗಳಲ್ಲಿ ಕಚ್ಚಾ-ಸೆಮಿಪಕ್ಕ ಮನೆಗಳಲ್ಲಿ ವಾಸಿಸುತ್ತಿರುವ ಕೊಳಗೇರಿ ನಿವಾಸಿಗಳಿಗೆ ಬೇಡಿಕೆಯಂತೆ, ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಆವಾಸ್ ಯೋಜನೆಯನ್ನು ರಾಜ್ಯ ಸರ್ಕಾರದ ವಸತಿ ಯೋಜನೆಗಳಾದ ಡಾ|| ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಯನ್ನು ಸಂಯೋಜನೆಗೊಳಿಸಿ ಒಟ್ಟು 295 ಯೋಜನೆಗಳಲ್ಲಿ 1,80,253 ಮನೆಗಳನ್ನು ನಿರ್ಮಾಣ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ವಿವಿಧ ಹಂತಗಳಲ್ಲಿ ಅನುಮೋದನೆ ದೊರಕಿರುತ್ತದೆ.

- ಅದರಂತೆ, ಸದರಿ ಯೋಜನೆಯಡಿ 1,27,913 ಮನೆಗಳನ್ನು ಪ್ರಾರಂಭಿಸಲಾಗಿದ್ದು ಈ ಪೈಕಿ 86,651 ಮನೆಗಳ ನಿರ್ಮಾಣ ಪೂರ್ಣಗೊಂಡಿದ್ದು, ಉಳಿದ 41,262 ಮನೆಗಳ ನಿರ್ಮಾಣ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತದೆ.
- ಪ್ರಥಮ ಹಂತದಲ್ಲಿ 36,789 ಮನೆಗಳನ್ನು ಮಾರ್ಚ್ 2024 ರಲ್ಲಿ ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ.
- 2ನೇ ಹಂತದಲ್ಲಿ 42,345 ಮನೆಗಳನ್ನು ಡಿಸೆಂಬರ್ 2025 ರ ಅಂತ್ಯಕ್ಕೆ ಹಂಚಿಕೆ ಮಾಡಲು ಉದ್ದೇಶಿಸಲಾಗಿರುತ್ತದೆ.
- ಉಳಿದ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುವ ಮನೆಗಳನ್ನು ಪೂರ್ಣಗೊಳಿಸಿ, 3ನೇ ಹಂತದಲ್ಲಿ ಹಂಚಿಕೆ ಮಾಡಲು ಉದ್ದೇಶಿಸಲಾಗಿದೆ.

ಸಂಖ್ಯೆ: ವಇ 91 ಎಸ್‌ಬಿಎಂ 2025]

**(ಬಿ.ಝಡ್. ಜಮೀರ್ ಅಹಮದ್ ಖಾನ್)**
ವಸತಿ, ವಕ್ಫ್, ಮತ್ತು ಅಲ್ಪ ಸಂಖ್ಯಾತರ
ಕಲ್ಯಾಣ ಸಚಿವರು

ಅನುಬಂಧ-"1"

# ಜಿಲ್ಲಾವಾರು ಕೊಳಚೆ ಪ್ರದೇಶಗಳ ವಿವರ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಒಟ್ಟು | ಘೋಷಿತ ಕೊಳಚೆ ಪ್ರದೇಶಗಳ ಸಂಖ್ಯೆ | ಕುಟುಂಬಗಳ ಸಂಖ್ಯೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಇತರೆ | ಒಟ್ಟು ಜನ ಸಂಖ್ಯೆ |
|---|---|---|---|---|---|---|---|---|
| 1 | ಬೆಂಗಳೂರು ನಗರ | 435 | 413 | 321296 | 582999 | 275743 | 677803 | 1536545 |
| 2 | ಬೆಂಗಳೂರು ಗ್ರಾ. | 33 | 33 | 8196 | 20538 | 13382 | 20514 | 54434 |
| 3 | ಬಾಗಲಕೋಟೆ | 104 | 104 | 8152 | 18280 | 5225 | 24255 | 47760 |
| 4 | ಬಳ್ಳಾರಿ | 92 | 89 | 13556 | 17736 | 11206 | 39728 | 68671 |
| 5 | ಬೆಳಗಾವಿ | 252 | 194 | 21589 | 55314 | 15424 | 57205 | 127943 |
| 6 | ಬೀದರ್ | 68 | 68 | 15306 | 32313 | 13024 | 38191 | 83528 |
| 7 | ಚಿಕ್ಕಬಳ್ಳಾಪುರ | 46 | 44 | 4664 | 12468 | 10850 | 16240 | 39558 |
| 8 | ಚಿಕ್ಕಮಗಳೂರು | 54 | 54 | 9996 | 13205 | 14030 | 28742 | 55977 |
| 9 | ಚಿತ್ರದುರ್ಗ | 69 | 64 | 14164 | 17918 | 10242 | 47659 | 75819 |
| 10 | ಚಾಮರಾಜನಗರ | 67 | 66 | 8311 | 15690 | 14744 | 20118 | 50552 |
| 11 | ದಾವಣಗೆರೆ | 80 | 80 | 14924 | 10200 | 8364 | 52907 | 71471 |
| 12 | ಧಾರವಾಡ | 138 | 138 | 25835 | 78790 | 17994 | 132389 | 229173 |
| 13 | ದಕ್ಷಿಣಕನ್ನಡ | 26 | 23 | 3462 | 4804 | 2713 | 13792 | 21309 |
| 14 | ಗದಗ | 102 | 87 | 7322 | 11056 | 4964 | 27590 | 43610 |
| 15 | ಹಾಸನ | 105 | 105 | 28997 | 32773 | 16969 | 103244 | 152986 |
| 16 | ಹಾವೇರಿ | 107 | 103 | 7332 | 11264 | 6689 | 27209 | 45162 |
| 17 | ಕಲಬುರಗಿ | 149 | 148 | 35241 | 98606 | 27723 | 79878 | 206207 |
| 18 | ಕೊಡಗು | 10 | 10 | 1036 | 1988 | 181 | 1512 | 3681 |
| 19 | ಕೋಲಾರ | 61 | 61 | 9950 | 25137 | 3635 | 29453 | 58225 |
| 20 | ಕೊಪ್ಪಳ | 51 | 46 | 12446 | 19807 | 11177 | 39247 | 70231 |
| 21 | ಮಂಡ್ಯ | 57 | 56 | 8796 | 14790 | 5368 | 30824 | 50982 |
| 22 | ಮೈಸೂರು | 115 | 115 | 15967 | 29075 | 8825 | 51934 | 89834 |
| 23 | ರಾಯಚೂರು | 94 | 82 | 20283 | 37558 | 16969 | 54886 | 109413 |
| 24 | ರಾಮನಗರ | 55 | 51 | 3559 | 13414 | 6599 | 7370 | 27383 |
| 25 | ಶಿವಮೊಗ್ಗ | 167 | 164 | 28884 | 16763 | 10950 | 116706 | 144419 |
| 26 | ತುಮಕೂರು | 130 | 128 | 17050 | 40682 | 6022 | 82948 | 129652 |
| 27 | ಉತ್ತರಕನ್ನಡ | 49 | 41 | 5495 | 6250 | 2539 | 23684 | 32473 |
| 28 | ಉಡುಪಿ | 17 | 17 | 3474 | 13060 | 2289 | 12019 | 27368 |
| 29 | ವಿಜಯಪುರ | 132 | 122 | 48104 | 92725 | 17015 | 148780 | 258520 |
| 30 | ಯಾದಗಿರ್ | 111 | 49 | 5611 | 19430 | 13303 | 18734 | 51467 |
| 31 | ವಿಜಯನಗರ | 49 | 111 | 16908 | 22121 | 13977 | 49550 | 85647 |
| | ಒಟ್ಟು | **3025** | **2866** | **745906** | **1386754** | **588135** | **2075111** | **4050000** |

ಸಹಾಯಕ ಕಂದಾಯ ಅಧಿಕಾರಿ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಬೆಂಗಳೂರು



ile No. DOH/91/SBM/2025-HSD 2-Housing SECRETARIAT (Computer No. 1992616)

Scanned with OKEN Scanner